ಕ್ರ.ಸಂ: ಎ3/ಭೂಮಿ/ಶ್ರೀನಿಧಿಸ್ಟೋನ್/2022-23 | 1281

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಶಿರಸಿ ವಿಭಾಗ, ಶಿರಸಿ.
ದಿ: 24-08-2022
☎/🖷 : 08384-226445

ರಿಗೆ,
ಅರಣ್ಯ ಸಂರಕ್ಷಣಾಧಿಕಾರಿಗಳು,
ಕೆನರಾ ವೃತ್ತ, ಶಿರಸಿ.

ಮಾನ್ಯರೆ,

ವಿಷಯ: Diversion of 1.97Ha. of forest land Khurse Village Sy.N.61, Sampakhanda Hobli, Sirsi Taluk, Uttara Kannada District (Sirsi Forest Divison) For building stone quarry and its approach road in favour of M/s Shrinidhi Stone Crusher,57/2, Manjguni village, Sirsi Taluk, Uttara Kannada District.

ಉಲ್ಲೇಖ:
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (FCA) ಬೆಂಗಳೂರು ರವರ ಪತ್ರ ಸಂಖ್ಯೆ: A5(2).GFL.CR-04/2020-21 Date:28-06-2022
2. ವಲಯ ಅರಣ್ಯಾಧಿಕಾರಿ ಜಾನ್ಮನೆ ರವರ ಪತ್ರ ಸಂಖ್ಯೆ:ಸಿಆರ್:253/2022 ದಿನಾಂಕ:10-08-2022
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಾನ್ಮನೆ ರವರ ಪತ್ರ ಸಂಖ್ಯೆ:ಸ.ಅ.ಸಂ./ಜಾನ್ಮನೆ/156/2022-23 ದಿನಾಂಕ:17-08-2022

-0-

ಈ ಮೇಲಿನ ವಿಷಯ ಕ್ಕೆ ಸಂಬಂಧಿಸಿದಂತೆ, ಶಿರಸಿ ತಾಲೂಕ ಸಂಪಖಂಡ ಹೋಬಳಿಯ ಖುರ್ಸೆ ಅ.ಸ.ನಂ. 61 ರಲ್ಲಿರುವ ಶ್ರೀನಿಧಿ ಸ್ಟೋನ್ ಕಲ್ಲುಕ್ವಾರಿ ಸ್ಥಳದ ವಸ್ತುಸ್ಥಿತಿ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ಹಾಗೂ ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆ ಆಗಿದೆಯೇ ಎನ್ನುವ ಕುರಿತು ವರದಿ ಸಲ್ಲಿಸಲು ಉಲ್ಲೇಖಿತ ಪತ್ರ (1) ರಂತೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (FCA) ಬೆಂಗಳೂರು ರವರು ಸೂಚಿಸಿರುತ್ತಾರೆ.

ಅದರಂತೆ, ಉಪ ವಲಯ ಅರಣ್ಯಾಧಿಕಾರಿ, ಜಾನ್ಮನೆ ಇವರು ಪ್ರಸ್ತುತ ಸ್ಥಳದ ಕುರಿತು ಪರಿಶೀಲನೆ ಮಾಡಿದ್ದು ಪ್ರಸ್ತಾಪಿಸಿದ ಜಾಗವು ಖುರ್ಸೆ ಗ್ರಾಮದ ಅ.ಸ.ನಂ. 61 ರ ವ್ಯಾಪ್ತಿಗೆ ಒಳಪಟ್ಟಿರುವುದು ಗ್ರಾಮ ನಕಾಶೆ ಆಧಾರದಿಂದ ಕಂಡುಬಂದಿರುತ್ತದೆ. ಸದರಿ ಪ್ರಕರಣದಲ್ಲಿರುವ ಮಾಹಿತಿ ಆಧಾರದಿಂದ N14 33.532 E074 40.728 ಜಿ.ಪಿ.ಎಸ್. ರೀಡಿಂಗ್ ಗಳನ್ನು ಪರಿಶೀಲಿಸಿ ಗೇಣಿಗೆ ಕೋರಿದ ಜಾಗವನ್ನು ಖಾತ್ರಿಪಡಿಸಿಕೊಳ್ಳಲಾಗಿರುತ್ತದೆ. ಗೇಣಿಗೆ ಕೋರಿದ ಜಾಗವು ಒಟ್ಟು 1.97 ಹೆ ವಿಸ್ತೀರ್ಣವಿದ್ದು, ಅದರಲ್ಲಿ 1.7 ಹೆ ಕ್ವಾರೆಗೆ, 0.27 ಹೆ ರಸ್ತೆಗೆ ಕೋರಿರುವುದು ನಿಜವಿರುತ್ತದೆ. ಆದರೆ ಸದರಿ ಗೇಣಿಗೆ ಕೋರಿದ ಜಾಗವು 2020-21 ನೇ ಸಾಲಿನಲ್ಲಿ ಆಕೇಶಿಯಾ ಅಂತಿಮ ಕಟಾವಣೆ ಮಾಡಿ ಎ.ಅರ್. ಮಾದರಿಯ ಮುಂಗಡ ಕಾಮಗಾರಿಯಾದ ಜಾಗವಾಗಿದ್ದು, ಅದರಲ್ಲಿ ಈಗಾಗಲೇ ಒಟ್ಟು 1.97 ಹೆ ಕ್ಷೇತ್ರದಲ್ಲಿ 3152 ಗುಂಡಿಗಳನ್ನು ತಗೆಯಲಾಗಿರುತ್ತದೆ. ಮತ್ತು ಸದರಿ ಜಾಗದಲ್ಲಿ 2021 ನೇ ಮಳೆಗಾಲದಲ್ಲಿ

ಗಿಡಗಳನ್ನು ನೆಟ್ಟು ಅಕೇಶಿಯಾ ನೆಡುತೋಪು ರಚಿಸಿದ್ದು ಇರುತ್ತದೆ. ಪ್ರಸ್ತಾಪಿತ ಸ್ಥಳದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆಯಾಗಿರುವುದಿಲ್ಲ ಹಾಗೂ ಯಾವುದೇ ಅರಣ್ಯೇತರ ಚಟುವಟಿಕೆಗಳು ಕಂಡುಬರುವುದಿಲ್ಲ ಎಂದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಾನ್ಮನೆರವರು ಉಲ್ಲೇಖಿತ ಪತ್ರ (3) ರಲ್ಲಿ ಈ ಕಚೇರಿಗೆ ವರದಿ ಸಲ್ಲಿಸಿರುತ್ತಾರೆ. ಉಲ್ಲೇಖಿತ ಪತ್ರ ಲಗ್ತ ಇಟ್ಟಿದೆ.

ಅದರಂತೆ ಈ ಕೆಳಸಹಿದಾರನಾದ ನಾನು ದಿನಾಂಕ: 23-08-2022 ರಂದು ಸ್ಥಳ ಪರಿಶೀಲಿಸಿದ್ದು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಜಾನ್ಮನೆಯವರ ವರದಿಯು ನಿಜವಿದ್ದು ಪ್ರಸ್ತಾಪಿತ ಸ್ಥಳದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ ಉಲ್ಲಂಘನೆಯಾಗಿರುವುದಿಲ್ಲ. ಹಾಗೂ ಅರಣ್ಯೇತರ ಚಟುವಟಿಕೆಗಳು ಕಂಡು ಬರುವುದಿಲ್ಲ ಎಂಬ ವಿಷಯವನ್ನು ತಮ್ಮ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ನಂಬುಗೆಯ

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಶಿರಸಿ ವಿಭಾಗ, ಶಿರಸಿ.

DESPATCHED
24-08-2022

D:\DCF Documents\2022-23\A3 SECTION\Letters\Letter to ccf\Letter to CCF 19-08-2022.docx